ಮಾನ್ಯ ಸದಸ್ಯರಿಗೂ ಸಂಬಂಧಿಸಿರುವ ಪ್ರಶ್ನೆಯನ್ನು ಸದಸ್ಯರಾದ ಕೃಷ್ಣಮೂರ್ತಿಯವರು ಕೇಳಿದರೆ, 'ನಮ್ಮ ಮಾನ ತೆಗೆಯುವುದು ಬೇಡ' ಎಂದು ಕೊರಿಸುವುದಕ್ಕೆ ಹೋದರೆ ಇದ್ಯಾದ ಧರ್ಮ? ಕೃಷ್ಣಮೂರ್ತಿಯವರೆ, ಇದು 224 ಜನ ಮಾನ್ಯ ಸದಸ್ಯರ ಮರ್ಯಾದೆಯ ಪ್ರಶ್ನೆಯಾಗಿದೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಬಿಜೆಪಿ ಶಾಸಕರಿರಬಹುದು, ಕಾಂಗ್ರೆಸ್ ಪಕ್ಷದ ಶಾಸಕರಿರಬಹುದು, ಜನತಾದಳ ಶಾಸಕರಿರಬಹುದು, ಎಲ್ಲರೂ ಈ ಸಮಸ್ಯೆ ಅನುಭವಿಸುತ್ತಿದ್ದಾರೆ.

ಡಾ: ಹೆಚ್. ಸಿ. ಮಹದೇವಪ್ಪ:– ಇದರ ಬಗ್ಗೆ ಸರ್ಕಾರವೂ ಅಷ್ಟೇ ಪ್ರಾಮಾಣಿಕವಾಗಿ ಸರಿಯಾದ ಉತ್ತರ ಒದಗಿಸಿದೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಮುಖಾಂತರ ಭಾರತ ದೇಶದ ಹಳ್ಳಿಗಳನ್ನು ಕಟ್ಟಬೇಕೆಂಬ ಸಂವಿಧಾನ ತಿದ್ದುಪಡಿಗೆ ವಿರುದ್ಧವಾಗಿ ಏನೂ ಮಾಡುವುದಕ್ಕಾಗುವುದಿಲ್ಲ ಮತ್ತು ಅಧಿಕಾರ ಬೇಡವೆಂದು ಎಲ್ಲಾ ರಾಜ್ಯಗಳ ಪ್ರತಿಪಕ್ಷಗಳ ಪ್ರತಿನಿಧಿಗಳು ಬಯಸುವುದಾದರೆ ಮತ್ತೆ ಪಾರ್ಲಿಮೆಂಟ್‌ಗೆ ವಾಪಸ್ಸು ಕಳುಹಿಸಿಕೊಡಲಾಗುವುದು. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ನೂರು ಹಳ್ಳಿಗಳನ್ನು ಬಲಪಡಿಸಬೇಕಾಗಿದೆ. ಇದಕ್ಕೆ ಸರ್ಕಾರ ಬದ್ಧವಿದ್ದು, ಅಗತ್ಯವಾದ ಸಿಬ್ಬಂದಿ, ಹಣಕಾಸನ್ನು ಒದಗಿಸಿಕೊಡುತ್ತೇವೆ. ಇದಕ್ಕೆ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಈ ಕುರಿತಾದ ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು.

ಬೆಂಗಳೂರು ಜಿಲ್ಲೆಯಲ್ಲಿ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ವರ್ಗಾಯಿಸುವುದು

235(3395) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಕೊರತೆ ಇದ್ದರೂ, ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಅನುದಾನಿತ ಮತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಇ) ಈ ಸರ್ಕಾರಿ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ವರ್ಗಾಯಿಸಲು ಸರ್ಕಾರದ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುವುದಿಲ್ಲ. ಆದರೆ 04 ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುತ್ತದೆ.

ಆ) ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುವುದಿಲ್ಲ.

ವಿದ್ಯಾರ್ಥಿಗಳ ಕೊರತೆಯಿರುವ ಖಾಸಗಿ ಅನುದಾನಿತ ಪ್ರೌಢಶಾಲೆಗಳ ವಿವರ ಕೆಳಕಂಡಂತಿದೆ;

ಕ್ರಮ ಸಂಖ್ಯೆ	ಶಾಲೆಯ ಹೆಸರು	ತರಗತಿ	ದಾಖಲಾತಿ/ಹಾಜರಾತಿ
1.	ಶಾಂತಿನಿ ಪ್ರೌಢಶಾಲೆ, ಪ್ರಕಾಶನಗರ, ಬೆಂಗಳೂರು	8ನೇ 9ನೇ 10ನೇ	08/09 27/09 25/14
2.	ಮೈ ಇನ್ಸ್‌ಟಿಟ್ಯೂಟ್ ಪ್ರೌಢಶಾಲೆ, ಮಲ್ಲೇಶ್ವರಂ, ಬೆಂಗಳೂರು.	8ನೇ 9ನೇ 10ನೇ	28/25 17/17 31/31
3.	ಕರ್ನಾಟಕ ಹಿಂದಿ ಪ್ರೌಢಶಾಲೆ, ಅವಿನ್ಯೂ ರಸ್ತೆ, ಬೆಂಗಳೂರು.	8ನೇ 9ನೇ 10ನೇ	07/06 10/06 09/08
4.	ಶಾರದಾ ವಿದ್ಯಾನಿಕೇತನ ಪ್ರೌಢಶಾಲೆ, ಮಲ್ಲೇಶ್ವರಂ, ಬೆಂಗಳೂರು.	8ನೇ 9ನೇ 10ನೇ	06/06 14/13 11/11

ದಾಖಲಾತಿ ಕೊರತೆ ಇರುವ ಈ ಶಾಲೆಗಳನ್ನು 2005–06ನೇ ಸಾಲಿನಿಂದ ಮುಚ್ಚಲು ಸಾರ್ವಜನಿಕ ಶಿಕ್ಷಣ ಇಲಾಖೆಯು ಆದೇಶ ನೀಡಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ, 'ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುವುದಿಲ್ಲ ಆದರೆ, ನಾಲ್ಕು ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುತ್ತದೆ' ಎಂದು ತಿಳಿಸಿದ್ದಾರೆ. ಈ ನಾಲ್ಕೂ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇದ್ದರೂ ಅನುದಾನ ಬಿಡುಗಡೆ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ. ಉತ್ತರದಲ್ಲಿ ನಾಲ್ಕು ಪ್ರೌಢಶಾಲೆಗಳ ವಿವರಗಳನ್ನು ನೀಡಿದ್ದಾರೆ. ಕೇವಲ 20, 30 ವಿದ್ಯಾರ್ಥಿಗಳಿಗೆ ಒಂದು ಪ್ರೌಢಶಾಲೆ ಇದೆ! ಇಂತಹ ಪ್ರೌಢಶಾಲೆಗಳು ಬೆಂಗಳೂರು ನಗರದಲ್ಲಿದೆ. ಕೇವಲ 20, 30 ವಿದ್ಯಾರ್ಥಿಗಳಿಂದ ನಡೆಸಲಾಗುತ್ತಿರುವ ಇಂತಹ ಪ್ರೌಢಶಾಲೆಗಳು ರಾಜ್ಯದಲ್ಲಿ ಎಷ್ಟಿವೆ ಎಂದು ಸನ್ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ:– ಅಧ್ಯಕ್ಷರೆ, ಈಗಾಗಲೇ ಒದಗಿಸಿರುವ ಉತ್ತರದಲ್ಲಿ ತಿಳಿಸಿರುವಂತೆ, ಕೇವಲ ನಾಲ್ಕು ಶಾಲೆಗಳಲ್ಲಿ ಮಾತ್ರ ವಿದ್ಯಾರ್ಥಿಗಳ ಕೊರತೆ ಇರುತ್ತದೆ. ಮತ್ತು ಈ ಕುರಿತಾದ ಅಂಕಿ–ಅಂಶಗಳನ್ನೂ ಒದಗಿಸಿಕೊಟ್ಟಿದ್ದೇನೆ. ವಿದ್ಯಾರ್ಥಿಗಳ ಕೊರತೆಯಿರುವ ಈ

ಶಾಲೆಗಳನ್ನು 2005–06ನೇ ಸಾಲಿನಿಂದ ಮುಚ್ಚುವುದಕ್ಕೆ ಸರ್ಕಾರ ತೀರ್ಮಾನಿಸಿದ್ದು, ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಸದರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ 20 ಟೀಚರ್‌ಗಳ ಪೈಕಿ 8 ಟೀಚರ್‌ಗಳು ಈಗಾಗಲೇ ಬೇರೆ ಶಾಲೆಗಳಿಗೆ ವರ್ಗಾವಣೆಯಾಗಿದ್ದಾರೆ. ಐದು ಟೀಚರ್‌ಗಳು ಸ್ವಯಂ ನಿವೃತ್ತಿ ಕೇಳಿದ್ದು, ಉಳಿದ 7 ಟೀಚರ್‌ಗಳನ್ನು ಇನ್ನಿತರ ಅನುದಾನಿತ ಶಾಲೆಗಳಿಗೆ ವರ್ಗಾವಣೆ ಮಾಡುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎ. ನಾರಾಯಣಸ್ವಾಮಿ:– ಇಂತಹ ಪ್ರೌಢಶಾಲೆಗಳು ರಾಜ್ಯದಲ್ಲಿ ಎಷ್ಟಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಈ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಾಧ್ಯಾಯರುಗಳನ್ನು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ವರ್ಗಾವಣೆ ಮಾಡಲಾಗುವುದೆಂದು ಹೇಳಿದ್ದೀರಿ. ಮತ್ತು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ, ಇಡೀ ರಾಜ್ಯಾದ್ಯಂತ 114 ಪ್ರೌಢಶಾಲೆಗಳನ್ನು ಹೊಸದಾಗಿ ತೆರೆಯಲಾಗುವುದೆಂದು ಪ್ರಸ್ತಾಪಿಸಿದ್ದೀರಿ. ತಾವು ನನ್ನ ಮತಕ್ಷೇತ್ರಕ್ಕೆ ಒಮ್ಮೆ ಭೇಟಿ ಕೊಟ್ಟು ಪರಿಶೀಲಿಸುವ ಮೂಲಕ, 4–5 ಪ್ರೌಢಶಾಲೆಗಳ ಅವಶ್ಯಕತೆ ಇದೆಯೆಂದು ತಾವು ಮನಗಂಡ ಮೇಲಾದರೂ ಪ್ರೌಢಶಾಲೆಗಳನ್ನು ತೆರೆಯುತ್ತೀರಾ? ಒಂದು ಸರ್ಕಾರಿ ಪ್ರೌಢಶಾಲೆಯಲ್ಲಿ ಒಂದೇ ತರಗತಿಯಲ್ಲಿ ಸುಮಾರು 120 ವಿದ್ಯಾರ್ಥಿಗಳಿದ್ದಾರೆ! ಮತ್ತು ಆನೇಕಲ್ ನಗರದ ಒಂದು ಪ್ರೌಢಶಾಲೆಯಲ್ಲಿ ಒಟ್ಟು 2200 ವಿದ್ಯಾರ್ಥಿಗಳಿದ್ದಾರೆ. ಆದಕಾರಣ, ಆನೇಕಲ್ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ತಾವು ಪ್ರಾಮುಖ್ಯತೆ ನೀಡುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ರಾಮಲಿಂಗಾರೆಡ್ಡಿ:– ರಾಜ್ಯದಲ್ಲಿರುವ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಿಗೂ ಒಂದೊಂದು ಪ್ರೌಢಶಾಲೆ ತೆರೆಯುವ ಅಗತ್ಯವಿರುವುದಾಗಿ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಿಗೆ ಆಯವ್ಯಯ ಪತ್ರ ಮಂಡಿಸುವ ಪೂರ್ವದಲ್ಲಿ ತಿಳಿಸಿದ್ದೆ. ಆದರೆ, ಡಾ: ಡಿ.ಎಂ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಶಾಲೆಗಳನ್ನು ತೆರೆಯಲಾಗುವುದೆಂದು ಆಯವ್ಯಯ ಪತ್ರದಲ್ಲಿ ತಿಳಿಸಿದ್ದಾರೆ. ಈಗಲೂ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಒಂದೊಂದು ಕ್ಷೇತ್ರಕ್ಕೂ 2–2 ಅಲ್ಲ, ಒಂದೊಂದು ಪ್ರೌಢಶಾಲೆ ಮಂಜೂರು ಮಾಡಿದರೂ ಸಾಕೆಂಬುದು ನನ್ನ ಅಭಿಪ್ರಾಯ ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಬಳಿ ಮಾತನಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ:– ಬೆಂಗಳೂರು ಸುತ್ತಮುತ್ತಲೂ ಜನಸಂಖ್ಯೆ ಬಹಳಷ್ಟು ಬೆಳವಣಿಗೆಯಾಗುತ್ತಿರುವ ಹಿನ್ನೆಲೆಯಲ್ಲಿ ಜನಸಂಖ್ಯೆ ಆಧಾರದ ಮೇಲಾದರೂ ಶಾಲೆಗಳನ್ನು ತೆರೆಯಬೇಕಾಗುತ್ತದೆ. ಈ ಕುರಿತಂತೆ ತಾವು ಆಯವ್ಯಯ ಪತ್ರದಲ್ಲಿ ಘೋಷಿಸಿದ್ದೀರಿ.

ಶ್ರೀ ರಾಮಲಿಂಗಾರೆಡ್ಡಿ:– ಆನೇಕಲ್‌ನಲ್ಲಿ ಶಾಲೆಯ ಅವಶ್ಯಕತೆಯಿರುವುದು ನನಗೂ ಗೊತ್ತಿರುವುದರಿಂದ ಇದರ ಬಗ್ಗೆ ಮಾತನಾಡುತ್ತೇನೆ.